# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 69
ಸದಸ್ಯರ ಹೆಸರು: ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ: 19.12.2022
ಉತ್ತರಿಸುವ ಸಚಿವರು: ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯು ಹಲಾಲ್ ಪ್ರಮಾಣ ಪಡೆದಿರುವ ಎಷ್ಟು ಸಂಸ್ಥೆಗಳ ವಿಚಾರಣೆ ನಡೆಸಿದ ಖಾಸಗಿ ವ್ಯಕ್ತಿಗಳಿಂದ ಸರ್ಕಾರದ ಯಾವುದೇ ಮಾನ್ಯತೆ ಪಡೆಯದೆ ಇರುವ ಸಂಸ್ಥೆಗಳಿಂದ ಪಡೆದಿರುವ ಪ್ರಮಾಣ ಪತ್ರವು ಒಂದು ಧರ್ಮ ವಿಶೇಷ ಆಚರಣೆಯನ್ನು ಪಾಲಿಸುವ ಸಲುವಾಗಿ ಒಂದು ಧರ್ಮದವರಿಗಾಗಿ ಪ್ರಮಾಣ ಪತ್ರ ಪಡೆದಿರುವ ಹಲವಾರು ಆಸ್ಪತ್ರೆಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು, ಇದಕ್ಕಾಗಿ ನೀಡುವ ಶುಲ್ಕದ ಮೂಲಕ ಭಯೋತ್ಪಾದನೆ, ಕೋಮು ಗಲಭೆಗಳನ್ನು ಹಾಗೂ ಸಮಾಜದಲ್ಲಿ ಸಮಾಜ ಘಾತುಕ ಶಕ್ತಿಗಳ ಮೂಲಕ ಗಲಭೆಗಳನ್ನು ಸೃಷ್ಟಿಸುವ ವ್ಯಕ್ತಿ, ಸಂಘಟನೆಗಳಿಗೆ ಆರ್ಥಿಕ ಸಹಾಯ ಮಾಡಿದಂತಾಗಲಿಲ್ಲವೇ. ಈ ಕುರಿತು ಸರ್ಕಾರದ ನಿಲುವೇನು; | ಹಲಾಲ್ ಪ್ರಮಾಣ ಪತ್ರವನ್ನು ಪೊಲೀಸ್ ಇಲಾಖೆ ವತಿಯಿಂದ ವಿತರಿಸಲಾಗುವುದಿಲ್ಲ. |
| ಆ) | ಈ ರೀತಿ ಪ್ರಮಾಣ ಪತ್ರಗಳನ್ನು ನೀಡುವ ಸಂಸ್ಥೆಗಳು ಸರ್ಕಾರದಿಂದ ಅನುಮತಿ ಪಡೆದಿರುವ ಕುರಿತು ಪೊಲೀಸ್ ಇಲಾಖೆ ಪರಿಶೀಲಿಸಿದೆಯೇ; ಹಲಾಲ್ ಪ್ರಮಾಣ ಪತ್ರ ನೀಡಲು ಸಂಗ್ರಹಿಸುವ ಶುಲ್ಕವು ಭಯೋತ್ಪಾದನಾ ಕೃತ್ಯಗಳಿಗೆ ಬಳಕೆಯಾಗುತ್ತಿರುವ ಕುರಿತು ಸರ್ಕಾರದ ನಿಲುವೇನು; | ಹಲಾಲ್ ಪ್ರಮಾಣ ಪತ್ರವನ್ನು ನೀಡುವ ಕುರಿತು ಪೊಲೀಸ್ ಇಲಾಖೆಯಿಂದ ಯಾವುದೇತರಹದ ಪರಿಶೀಲನೆಯನ್ನು ಮಾಡಿರುವುದಿಲ್ಲ. |
| ಇ) | ಹಲಾಲ್ ಪ್ರಮಾಣ ಪತ್ರ ನೀಡುವ ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಸಂಸ್ಥೆಗಳು ಸಂಗ್ರಹಿಸುವ ಶುಲ್ಕವನ್ನು ಭಯೋತ್ಪದನಾ ಕೃತ್ಯಗಳಿಗೆ ಹಾಗೂ ಕೋಮುಗಲಭೆಗಳನ್ನು ಸೃಷ್ಟಿಸಲು ಬಳಸುತ್ತಿರುವ ಕುರಿತು ಸರ್ಕಾರದ ನಿಲುವೇನು; ಈ ಸಂಸ್ಥೆಗಳು ಭಯೋತ್ಪದನಾ ಸಂಸ್ಥೆಗಳೀಗೆ ಹಾಗೂ ಕೋಮು ಗಲಭೆ ಸೃಷ್ಟಿ ಮಾಡುವವರಿಗೆ ಆರ್ಥಿಕ ಸಹಾಯ ಮಾಡುತ್ತಿರುವ ಕುರಿತು ಹಾಗೂ ಭಯೋತ್ಪಾದಕರನ್ನು ಬಂದಿಸಿದಾಗ ಅವರ ಪರವಾಗಿ ಕಾನೂನು ಹೋರಾಟ ಮಾಡಲು ಈ ಹಣವನ್ನು ಬಳಸಿಕೊಳ್ಳುತ್ತಿರುವ ಕುರಿತು ಸರ್ಕಾರದ ನಿಲುವೇನು? | ಈ ಬಗೆಯ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಈ ರೀತಿಯ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.<br><br>ಪೊಲೀಸ್ ಇಲಾಖೆಯ ವತಿಯಿಂದ ಭಯೋತ್ಪದಕ ಘಟನೆಗಳನ್ನು ತಡೆಗಟ್ಟಲು ಸೂಕ್ತ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. |

ಒಇ 689 ಎಸ್‌ಎಸ್‌ಟಿ 2022(ಇ)

(ಆರಗ ಜ್ಞಾನೇಂದ್ರ)
ಗೃಹ ಸಚಿವರು